# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1931 |
| ಸದಸ್ಯರ ಹೆಸರು | ಶ್ರೀ ಎಸ್ ರವಿಕುಮಾರ್ |
| ಉತ್ತರಿಸುವ ದಿನಾಂಕ | 16-03-2022 |
| ಉತ್ತರಿಸುವವರು | ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದೇವಾಲಯಗಳ ಆಸ್ತಿಗಳ ನಿರ್ವಹಣೆ ಕುರಿತು ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ; | ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ದೇವಾಲಯಗಳ ಆಸ್ತಿಗಳ ನಿರ್ವಹಣೆ ಕುರಿತಂತೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997, ನಿಯಮಗಳು 2002ರಡಿಯಲ್ಲಿ ಕ್ರಮಗಳನ್ನು ಕೈಗೊಳ್ಳಲಾಗಿದೆ. |
| ಆ) | ಪ್ರಸ್ತುತ ರಾಜ್ಯದ ದೇವಾಲಯಗಳ ಆಸ್ತಿಯ ಒಟ್ಟು ಮೊತ್ತವೆಷ್ಟು; (ಜಿಲ್ಲಾವಾರು, ದೇವಸ್ಥಾನವಾರು ಮಾಹಿತಿ ನೀಡುವುದು) | ರಾಜ್ಯದಾದ್ಯಂತ ಇರುವ ಅಧಿಸೂಚಿತ ದೇವಾಲಯದ ಸ್ವತ್ತುಗಳು ಆಯಾಯ ಜಿಲ್ಲೆಯಲ್ಲಿನ ಗ್ರಾಮಠಾಣಾ/ ಪಂಚಾಯಿತಿ/ ಪುರಸಭೆ/ ನಗರಸಭೆ/ ಮಹಾನಗರಪಾಲಿಕೆ/ ಬೃಹತ್ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವುದರಿಂದ, ಸದರಿ ವ್ಯಾಪಿಯಲ್ಲಿ ಇರುವ ಅಧಿಸೂಚಿತ ದೇವಾಲಯಗಳ ಸ್ವತ್ತುಗಳ (ಖಾಲಿಜಾಗ/ನಿವೇಶನ/ ಕಟ್ಟಡ/ ಮಳಿಗೆಗಳು/ ಕಲ್ಯಾಣ ಮಂಟಪ/ ಸಮುದಾಯ ಭವನ/ ಅತಿಥಿ ಗೃಹಗಳು ಇತ್ಯಾದಿ) ಮೌಲ್ಯ ನಿರ್ಧರಣೆಯನ್ನು ಅಲ್ಲಿನ ಸ್ಥಳೀಯ ಮಾರುಕಟ್ಟೆ ದರಕ್ಕನುಗುಣವಾಗಿ ಸಕ್ಷಮ ಪ್ರಾಧಿಕಾರಿಗಳು (ನೋಂದಣಿ ಮತ್ತು ಮುದ್ರಾಂಕ ಇಲಾಖೆ & ಲೋಕೋಪಯೋಗಿ ಇಲಾಖೆ) ರವರಿಂದ ನಿರ್ಧರಿಸಲ್ಪಡುವುದರಿಂದ, ಅಲ್ಲದೇ ಕಾಲ ಕಾಲಕ್ಕೆ ಸ್ವತ್ತುಗಳ ಮೌಲ್ಯಗಳಲ್ಲಿ ಬದಲಾವಣೆಯಾಗುವುದರಿಂದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಒಟ್ಟು 34563 ಮುಜರಾಯಿ ದೇವಾಲಯಗಳ 2021-22ನೇ ಸಾಲಿನ ಸ್ವತ್ತುಗಳ ನಿಖರ ಮೌಲ್ಯ ಕಲೆಹಾಕಲು ಸಾಧ್ಯವಾಗಿರುವುದಿಲ್ಲ.<br><br>ಅಧಿಸೂಚಿತ ದೇವಾಲಯಗಳು ಹೊಂದಿರುವ ಚಿನ್ನ, ಬೆಳ್ಳಿ, ಮುತ್ತು ರತ್ನ ಪಚ್ಚೆಗಳನ್ನೊಳಗೊಂಡ ಆಭರಣಗಳಂತಹ ಆಸ್ತಿಗಳು ಪ್ರಾಚೀನ ಹಾಗೂ ಅರ್ವಾಚೀನ ಕಾಲದವುಗಳಾಗಿದ್ದು, ಅವುಗಳ ಕ್ಯಾಟ್ಲಾಗಿಂಗ್ ಮತ್ತು ಇಂಡೆಕ್ಸಿಂಗ್ ನಡೆಯುತ್ತಿರುವುದರಿಂದ ಪ್ರಸ್ತುತ ನಿಖರವಾದ ಅಂಕಿ-ಅಂಶಗಳು ಲಭ್ಯವಿರುವುದಿಲ್ಲ. |
| ಇ) | ದೇವಾಲಯಗಳು ಎಷ್ಟು ಎಕರೆ ಸ್ಥಿರಾಸ್ತಿಗಳನ್ನು ಹೊಂದಿವೆ? (ಜಿಲ್ಲಾವಾರು ಮಾಹಿತಿ ನೀಡುವುದು) | ಪ್ರಸ್ತುತ ರಾಜ್ಯದಲ್ಲಿ ಮುಜರಾಯಿ ಇಲಾಖೆ ಅಧೀನಕ್ಕೆ ಒಳಪಟ್ಟಿರುವ 34,563 ಅಧಿಸೂಚಿತ ದೇವಸ್ಥಾನ/ ಸಂಸ್ಥೆಗಳಿವೆ. ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ಎಲ್ಲಾ ದೇವಾಲಯಗಳ ಒಟ್ಟು ಜಮೀನುಗಳ ಬಗ್ಗೆ ಈವರೆಗೆ ಸ್ಪಷ್ಟ ಅಂಕಿ-ಅಂಶಗಳ ಮಾಹಿತಿ ಲಭ್ಯವಿರುವುದಿಲ್ಲ. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಯವರಿಗೆ ಮಾಹಿತಿ ಸಲ್ಲಿಸುವಂತೆ ಕೋರಲಾಗಿದೆ.<br><br>ಡಿಸೆಂಬರ್ 2021ರ ಅಂತ್ಯಕ್ಕೆ ಜಿಲ್ಲಾಧಿಕಾರಿಗಳಿಂದ ಸ್ವೀಕೃತವಾದ ದೇವಸ್ಥಾನಗಳಿಗೆ ಸೇರಿದ ಸ್ಥಿರಸ್ವತ್ತುಗಳ ಕುರಿತ ಲಭ್ಯವಿರುವ ಮಾಹಿತಿಯನ್ನು ಸಿ.ಡಿ. ರೂಪದಲ್ಲಿ ಒದಗಿಸಿದೆ. |

ಸಂಖ್ಯೆ: ಕಂಇ 88 ಮುಸಪು 2022

(ಶಶಿಕಲಾ. ಅ. ಜೊಲ್ಲೆ)
ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು